# ಸಂಪಾದಕೀಯ

## ಗುರುವಿನಿಂದ ಜ್ಞಾನ

ಅನಾದಿಕಾಲದಿಂದಲೂ ಮಾನವನು ತನಗಿಂತ ಮಿಗಿಲಾದ ಶಕ್ತಿಯನ್ನು ಪ್ರಕೃತಿಯ ವೈವಿಧ್ಯಗಳ ಹಿನ್ನೆಲೆಯಲ್ಲಿ ಗುರುತಿಸಿದ್ದಾನೆ. ಎಲ್ಲ ಜನಾಂಗಗಳಲ್ಲೂ ಧಾರ್ಮಿಕ ನಂಬಿಕೆಗಳು ಕಂಡುಬರುತ್ತವೆ. ತನ್ನ ಜೀವನದಲ್ಲಿ ಬರುವ ಕಷ್ಟ ಸಂಕಟಗಳನ್ನು ಎದುರಿಸುವ ಸಲುವಾಗಿ ಇಂತಹ ಅತೀಂದ್ರಿಯ ಶಕ್ತಿಗಳ ಆರಾಧನೆಯನ್ನು ಮಾನವ ಮಾಡುತ್ತಾನೆ ಎಂದು ಕೆಲವರ ಅಭಿಪ್ರಾಯ. ಪ್ರಕೃತಿಯ ವಿಕೋಪಗಳ ಭೀತಿಯಿಂದಲೂ ಗಿಡ, ಮರ, ಪರ್ವತ, ನದಿಗಳ ಆರಾಧನೆಯಲ್ಲಿ ಮಾನವನು ತೊಡಗುತ್ತಾನೆ ಎಂಬುದು ಮತ್ತೂ ಕೆಲವರ ಅಭಿಮತ. ಏನೇ ಆಗಲಿ, ತನಗಿಂತ ಹಿರಿದಾದ ಒಂದು ಶಕ್ತಿಯಿದೆ ಎಂಬುದನ್ನು ಮಾನವ ನಂಬಿದ್ದಾನೆ. ಅದನ್ನು ಅರಿವಿನಿಂದ ಪಡೆದುಕೊಂಡಿದ್ದಾನೆ ಎಂದು ಹೇಳಲಾಗದಿದ್ದರೂ ಪ್ರತಿಯೊಂದು ಜನಾಂಗವನ್ನು ಬೆಸೆಯುವ ಹಾಗೂ ಅದಕ್ಕೆ ಒಂದು ವೈಶಿಷ್ಟ್ಯವನ್ನು ನೀಡುವ ಸೂತ್ರಗಳೆಂದರೆ ಅದರ ಧಾರ್ಮಿಕ ನಂಬಿಕೆಗಳು.

ಎಲ್ಲ ಧರ್ಮಗಳೂ ಒಂದಲ್ಲ ಒಂದು ರೀತಿಯಲ್ಲಿ ದಿವ್ಯತೆಯನ್ನು ಕುರಿತು ತಿಳಿಸಲು ಪ್ರಯತ್ನಿಸಿವೆ. ದೇವರೊಂದಿಗೆ, ಪಿತೃದೇವತೆಗಳೊಂದಿಗೆ, ಪ್ರಕೃತಿಯ ಶಕ್ತಿಗಳೊಂದಿಗೆ ಸಂಪರ್ಕ ಸಾಧಿಸುವ ವಿಧಿಗಳು, ಪೂಜೆಗಳು, ವಿಧವಿಧವಾದ ಆಚಾರಗಳ ಮೂಲಕ ಮನುಷ್ಯ ಕೇವಲ ಶರೀರವಲ್ಲ, ಅವನು ಹೇಗೋ ಈ ದೇಹ-ಮನಸ್ಸುಗಳ ಪಂಜರದೊಳಗೆ ಸಿಕ್ಕಿಹಾಕಿಕೊಂಡಿದ್ದಾನೆ ಎಂಬ ತತ್ತ್ವ ಎಲ್ಲ ಧರ್ಮಗಳಲ್ಲೂ ಕಂಡುಬರುತ್ತದೆ. ಮಾನವನ ಸ್ಥಿತಿಯು ಒಂದು ಅವನತಿ, ಅವನು ದೇವರಲ್ಲಿ ನಂಬಿಕೆಯಿಡುವುದರ ಮೂಲಕ, ಒಳ್ಳೆಯ ಜೀವನದ ಮೂಲಕ ಹಿಂದಿನ ಪವಿತ್ರ ಸ್ಥಿತಿಯನ್ನು ಪಡೆದುಕೊಳ್ಳಬೇಕು ಎಂಬುದು ಪಾಶ್ಚಾತ್ಯ ಧರ್ಮಗಳಲ್ಲಿರುವ ಮೂಲ ನಂಬಿಕೆ. 'ನಾನು ಈ ಶರೀರ, ಮನಸ್ಸು' ಎಂಬ ಅವಿದ್ಯೆಯಿಂದ ಮುಕ್ತನಾದರೆ ಜೀವತ್ವ ನಾಶವಾಗಿ ಪರಮಾತ್ಮನೊಂದಿಗೆ ಒಂದಾಗಬಹುದು ಎಂಬುದು ಹಿಂದೂ ಧರ್ಮದ ತತ್ತ್ವ. ಆಸೆಗಳಿಂದ ಮುಕ್ತನಾಗಬೇಕು ಎಂಬುದು ಬೌದ್ಧ ಧರ್ಮದ ನಿಲುವು.

ಹೀಗೆ ಎಲ್ಲ ಧರ್ಮಗಳಲ್ಲೂ ಮಾನವನ ಮೂಲ ಸ್ವರೂಪದ ಕುರಿತು, ಜಗತ್ತಿನ ಸೃಷ್ಟಿಯ ಕುರಿತು, ದೇವರ ಕುರಿತು ಹಾಗೂ ಮಾನವ-ಜಗತ್ತು-ದೇವರ ನಡುವಣ ಸಂಬಂಧ ಕುರಿತು ಅನೇಕ ರೀತಿಯ ವಿಚಾರಗಳಿವೆ. ಆಯಾ ಧರ್ಮಪ್ರವರ್ತಕರ ಅನುಭೂತಿಯ ಆಧಾರದ ಮೇಲೆ ಅವರು ನೀಡುವ ವ್ಯಾಖ್ಯಾನವೂ ಭಿನ್ನವಾಗಿರುತ್ತದೆ. ವ್ಯಕ್ತಿಯು ಯಾವ ಮಾರ್ಗವನ್ನು ಅನುಸರಿಸಬೇಕು, ಧರ್ಮದ ಮೂಲ ಉದ್ದೇಶವೇನು ಎಂಬುದನ್ನು ತಿಳಿಸುವ ಆಚಾರ್ಯರು, ಗುರುಗಳು ಎಲ್ಲ ಧರ್ಮಗಳಲ್ಲೂ ಕಂಡುಬರುತ್ತಾರೆ. ಇಂತಹ ಆಚಾರ್ಯರ ಪವಿತ್ರ ಜೀವನವೇ ಆಯಾ ಧರ್ಮದಲ್ಲಿನ ನಂಬಿಕೆಗಳಿಗೆ ಇಂಬುಕೊಡುವ ಅಂಶ. ಸಾಧಕರು ಕೇವಲ ಗ್ರಂಥಗಳಿಂದ ಸ್ಫೂರ್ತಿ ಪಡೆಯುವುದಿಲ್ಲ. ಆಚಾರ್ಯರ, ಗುರುಗಳ ಜೀವನದಲ್ಲಿ ವ್ಯಕ್ತವಾದ ಆದರ್ಶಗಳನ್ನು ಅನುಸರಿಸುವುದರ ಮೂಲಕವೂ ಗುರಿಯತ್ತ ಸಾಗಲು ಪ್ರಯತ್ನಿಸುತ್ತಾರೆ. ಪುಸ್ತಕಗಳಿಂದಲೇ ಜ್ಞಾನವು ದೊರೆಯುವುದಾಗಿದ್ದರೆ ಗ್ರಂಥಾ



ಲಯಗಳೇ ಸಾಕಾಗುತ್ತಿದ್ದವು. ಯಾವುದೇ ಶಿಕ್ಷಕರ ಅಗತ್ಯವಿರುತ್ತಿರಲಿಲ್ಲ. ಇಂತಹ ಸನ್ನಿವೇಶದಲ್ಲೂ ಆಯಾ ಪುಸ್ತಕವನ್ನು ಬರೆದ ವ್ಯಕ್ತಿಯೇ ಪರೋಕ್ಷವಾಗಿ ಸ್ಫೂರ್ತಿಯ ಸೆಲೆಯಾಗುತ್ತಾನೆ, ಏಕೆಂದರೆ ಆ ವಿಚಾರಗಳು ಅವನಲ್ಲಿ ಒಂದಿಷ್ಟಾದರೂ ವ್ಯಕ್ತವಾಗಿರುತ್ತವೆ. ಜಡಪದಾರ್ಥವಾದ ಗ್ರಂಥಕ್ಕಿಂತ ಆ ವಿಚಾರಗಳನ್ನು ಹೇಳಿದ ವ್ಯಕ್ತಿ ಅಥವಾ ಬರೆದ ವ್ಯಕ್ತಿಯೇ ಇಲ್ಲಿ ಮುಖ್ಯ. ಅವನಲ್ಲಿನ ಚೈತನ್ಯವೇ ಪುಸ್ತಕದ ಹಾಳೆಗಳ ಮೂಲಕ ಮಾತನಾಡುತ್ತದೆ, ವಿಚಾರಗಳನ್ನು ತಿಳಿಸುತ್ತದೆ.

ಶ್ರೀರಾಮಕೃಷ್ಣ ಪರಮಹಂಸರು ಹೇಳುತ್ತಿದ್ದಂತೆ ಗ್ರಂಥಗಳು ವಿದ್ಯೆ ನಮ್ಮನ್ನು ಗ್ರಂಥಿಯಂತೆ ಬಂಧಿಸುವುದು. ಅದು ಪಾಂಡಿತ್ಯದ ಅಹಂಕಾರವನ್ನು ತರುವುದೇ ವಿನಾ ಸಾಧನೆಯಲ್ಲಿ

ಹೇಗೆ ಹಲವು ಮಂದಿ ಮಂಜಿನ ಗಡ್ಡೆಯನ್ನು ಕೇಳಿರುವರೊ ಆದರೆ ನೋಡಿಲ್ಲವೊ, ಹಾಗೆಯೆ ಹಲವು ಧರ್ಮಪ್ರಚಾರಕರು ದೇವರ ಗುಣಗಳ ವಿಷಯವಾಗಿ ಪುಸ್ತಕದಲ್ಲಿ ಓದಿರುವರು, ಆದರೆ ಪ್ರತ್ಯಕ್ಷವಾಗಿ ಅದನ್ನು ಕಂಡಿಲ್ಲ. ಹಲವರು ಮಂಜಿನಗಡ್ಡೆಯನ್ನು ನೋಡಿರುವರು, ಆದರೆ ಅದರ ರುಚಿಯನ್ನು ಅರಿಯರು. ಅದರಂತೆಯೇ ಹಲವರಿಗೆ ಪರಮಾತ್ಮನ ಮಹಿಮೆಯ ಕ್ಷಣಿಕ ದೃಶ್ಯ ಲಭಿಸಿರಬಹುದು, ಆದರೆ ಅದರ ಸತ್ಯಾಂಶವನ್ನು ತಿಳಿದುಕೊಂಡಿಲ್ಲ. ಯಾರು ಮಂಜಿನಗಡ್ಡೆಯನ್ನು ತಿಂದಿರುವರೋ ಅವರು ಮಾತ್ರ ಅದು ಹೇಗಿದೆ ಎಂಬುದನ್ನು ಹೇಳಬಹುದು. ಇದರಂತೆಯೆ ದೇವರೊಂದಿಗೆ ಹಲವು ಭಾವಗಳಲ್ಲಿ ಅಂದರೆ ದಾಸನಂತೆ, ಸ್ನೇಹಿತನಂತೆ, ಪ್ರೇಮಿಯಂತೆ ಆತನಲ್ಲಿ ತನ್ಮಯರಾಗಬಲ್ಲವರು ಮಾತ್ರ ಅವನ ಮಹಿಮೆಯನ್ನು ಸರಿಯಾಗಿ ಹೇಳಬಲ್ಲರು.

**—ಶ್ರೀರಾಮಕೃಷ್ಣ**

ತೊಡಗಿಸುವುದಿಲ್ಲ. ಗ್ರಂಥಗಳಿಂದ ಗಳಿಸಿದ ವಿದ್ಯೆಯ ಚೌಕಟ್ಟಿಗೇ ಎಲ್ಲ ಚಿಂತನೆಗಳೂ ಸೀಮಿತವಾದರೆ ಸ್ವತಂತ್ರವಾಗಿ ಆಲೋಚಿಸುವ ವೈಜ್ಞಾನಿಕ ಮನೋಭಾವವು ಬೆಳೆಯದೆ ವ್ಯಕ್ತಿಯ ತಿಳಿವಳಿಕೆ ಕೇವಲ ಪುಸ್ತಕದ ಬದನೆಯಾಗುತ್ತದೆ. ಆ ಗ್ರಂಥ ಅಥವಾ ಈ ಗ್ರಂಥವನ್ನು ಉದಾಹರಿಸಬಲ್ಲ ವ್ಯಕ್ತಿಗಳಲ್ಲೂ ತಮ್ಮ ಸ್ಮೃತಿಶಕ್ತಿಯ ಅಹಂ ಇರುತ್ತದೆ. ಶ್ರೀರಾಮಕೃಷ್ಣರು ಯಾವ ಶಾಸ್ತ್ರಗಳನ್ನೂ quote ಮಾಡುತ್ತಿರಲಿಲ್ಲ. ತಮ್ಮ ಸ್ವಾನುಭವದ ನುಡಿಗಳನ್ನು ಮಾತ್ರ ಹೇಳುತ್ತಿದ್ದರು. ಅವೆಲ್ಲವೂ ಶಾಸ್ತ್ರಗಳ ತಿರುಳನ್ನೇ ಹೊಂದಿರುತ್ತಿದ್ದವು. ಪಂಚಾಂಗಗಳಲ್ಲಿ ಈ ದಿನಗಳಂದು ಇಂತಿಷ್ಟು ಮಳೆಯಾಗುವುದು ಎಂದು ಬರೆದಿರುತ್ತದೆ. ಆದರೆ ಪಂಚಾಂಗವನ್ನು ಹಿಂಡಿದರೆ ಒಂದೇ ಒಂದು ಹನಿಯಷ್ಟು ನೀರೂ ಹೊರಬರುವುದಿಲ್ಲವೆಂಬ ಉದಾಹರಣೆಯ ಮೂಲಕ ಶ್ರೀರಾಮಕೃಷ್ಣರು ಅನುಭವದ ಆಧಾರವಿಲ್ಲದ ಒಣ ಚರ್ಚೆ ಅಥವಾ ಪಾಂಡಿತ್ಯ ಹೆಚ್ಚು ಪ್ರಯೋಜನಕಾರಿಯಲ್ಲ ಎಂಬುದನ್ನು ತೋರಿಸಿದ್ದಾರೆ.

ಆಧ್ಯಾತ್ಮಿಕ ಅನುಭವದ ಬಲದಿಂದ ಹೊರಹೊಮ್ಮುವ ಮಾತುಗಳು ಪರಿಣಾಮಕಾರಿಯಾಗಿರುತ್ತವೆ. ಏಸುಕ್ರಿಸ್ತನು ಮಾತನಾಡುತ್ತಿದ್ದುದನ್ನು ಕೇಳಿಸಿಕೊಂಡ ವ್ಯಕ್ತಿ ಹೇಳುತ್ತಾನೆ, "ಅಧಿಕಾರವುಳ್ಳ ವ್ಯಕ್ತಿಯಂತೆ ಅವನು ತಿಳಿಸುತ್ತಿದ್ದ, ಪಂಡಿತರಂತೆ ಅಲ್ಲ." ದಿವ್ಯಸಂದೇಶದ ವಾಹಕರಾಗಿ ಆಚಾರ್ಯರು ಸಂಚರಿಸುತ್ತಾರೆ. **ಆಚಿನೋತಿ ಶಾಸ್ತ್ರಾರ್ಥಮ್ ಇತಿ ಆಚಾರ್ಯಃ** —ಶಾಸ್ತ್ರಗಳ ಅರ್ಥವನ್ನು ಗ್ರಹಿಸಿರುವವರು ಆಚಾರ್ಯರು. ಸಾಧನೆ, ಬ್ರಹ್ಮಚರ್ಯ, ತಪಸ್ಸುಗಳ ಮೂಲಕ ಶಾಸ್ತ್ರಗಳಲ್ಲಿನ ಒಳಮರ್ಮವನ್ನು ತಿಳಿದಿರುವವರು ಆಚಾರ್ಯರು. ಗ್ರಂಥಗಳನ್ನು ಓದಿರದಿದ್ದರೂ ಅವುಗಳಲ್ಲಿನ ತತ್ತ್ವವೆಲ್ಲ ಇವರ ಮೂಲಕ ವ್ಯಕ್ತವಾಗುತ್ತದೆ. ಶ್ರೀರಾಮಕೃಷ್ಣರ ಜೀವನದಲ್ಲಿ ಬರುವ ಒಂದು ಘಟನೆಯು ಇದನ್ನು ಸ್ಪಷ್ಟಪಡಿಸುತ್ತದೆ. ಅವರ ಶಿಷ್ಯ ಹರಿನಾಥ (ಸ್ವಾಮಿ ತುರೀಯಾನಂದರು) ವೇದಾಂತ, ಉಪನಿಷತ್ತುಗಳ ಅಧ್ಯಯನದಲ್ಲಿ ಆಸಕ್ತನಾಗಿ ಬಹಳ ದಿನಗಳ ಕಾಲ ಶ್ರೀರಾಮಕೃಷ್ಣರನ್ನು ನೋಡಲು ಬರಲಿಲ್ಲ. ಬಳಿಕ ಅವನನ್ನು ಕಂಡಾಗ, ಶ್ರೀರಾಮಕೃಷ್ಣರು ಕೇಳಿದರು, "ಏನಪ್ಪಾ? ನೀನು ಶಾಸ್ತ್ರಗಳನ್ನು ಬಹಳವಾಗಿ ಓದುತ್ತಿರುವಿಯಂತೆ? ಶಾಸ್ತ್ರಗಳು ಏನು ಹೇಳುತ್ತವೆ? ಈ ಜಗತ್ತು ನಶ್ವರ, ಈಶ್ವರನೊಬ್ಬನೇ ಸತ್ಯ ಎಂದಲ್ಲವೇ? ಇದನ್ನು ಸಾಧನೆಯ ಮೂಲಕ ಅನುಭವಕ್ಕೆ ತಂದುಕೊಳ್ಳಬೇಕು." ಆಗ ಹರಿನಾಥನಿಗೆ ತಕ್ಷಣ ಹೊಳೆಯಿತು, "ಶಾಸ್ತ್ರಗಳು ಸಾವಿರಾರು ಮಾತುಗಳಲ್ಲಿ ತಿಳಿಸಲು ಪ್ರಯತ್ನಿಸುವ ಸತ್ಯವನ್ನು ಇವರು ಎಷ್ಟು ಸರಳವಾಗಿ ಹೇಳಿದರು. ಪಾಂಡಿತ್ಯದಿಂದ ಏನೂ ಪ್ರಯೋಜನವಿಲ್ಲ."

ದೀರ್ಘಕಾಲದಿಂದ ನಾನಾ ವಿಚಾರಗಳು ಶಾಸ್ತ್ರಗಳಿಗೆ ಸೇರಿಕೊಂಡಿರುವುದರಿಂದ ಹಾಗೂ ಶಾಸ್ತ್ರಗಳೂ ಅನೇಕವಾದ್ದರಿಂದ ಯಾವುದು ಮುಖ್ಯ ಎಂಬ ಗೊಂದಲ ಸಾಧಕನನ್ನು ಕಾಡುವುದು ಸಹಜ. ಎಲ್ಲ ಶಾಸ್ತ್ರಗಳೂ "ಇದೇ ಉತ್ತಮ ಮಾರ್ಗ"ವೆಂದು ಹೇಳಿಕೊಳ್ಳುತ್ತವೆ. ಅಂತೆಯೇ ಎಲ್ಲ ಧಾರ್ಮಿಕ ಮುಖಂಡರೂ ತಮ್ಮ ತಮ್ಮ ಮಾರ್ಗವೇ ಸರಿಯಾದ ಮಾರ್ಗವೆಂದು ಪ್ರಚಾರ ಮಾಡುವುದರಿಂದ ಯಾವ ಮಾರ್ಗವನ್ನು ಅನುಸರಿಸಿದರೆ ಮೋಕ್ಷ ಅಥವಾ ಭಗವಂತನ ಸಾನ್ನಿಧ್ಯವನ್ನು ಪಡೆಯಬಹುದು ಎಂಬ ಸಂಶಯ ಸಾಧಕನನ್ನು ಪ್ರಾರಂಭದ ದಿನಗಳಲ್ಲಿ ಕಾಡುತ್ತದೆ. ಅಂತಹ ಸಂದರ್ಭಗಳಲ್ಲಿ ಗುರುವಿನ ಆವಶ್ಯಕತೆ ಇರುತ್ತದೆ. ಕಳ್ಳನಿಗೂ ಚೋರವಿದ್ಯೆಯನ್ನು ಕಲಿಯಲು ಗುರುವಿನ ನೆರವು ಬೇಕಾಗುತ್ತದೆ. ಇನ್ನು ಈ ಸಂಸಾರವೆಂಬ ಸಾಗರವನ್ನು ದಾಟುವ ಪರಿಯನ್ನು ತಿಳಿಸುವ ಗುರು ಬೇಕಾಗಿಲ್ಲವೆಂದು ಹೇಳಲು ಸಾಧ್ಯವಿಲ್ಲ.

ಶುದ್ಧವಾದ ಮನಸ್ಸೇ ಸ್ನೇಹಿತನಂತೆ, ಗುರುವಿನಂತೆ ಸಲಹಿ ಮಾರ್ಗದಲ್ಲಿ ಮುನ್ನಡೆಯಲು ಸಹಕರಿಸುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಶ್ರೀರಾಮಕೃಷ್ಣರು ಪ್ರಾರಂಭದಲ್ಲಿ ಯಾವ ಗುರುವನ್ನೂ ಪಡೆದಿರಲಿಲ್ಲ. ಜಗನ್ಮಾತೆಯ ದರ್ಶನವನ್ನು ಕೇವಲ ತೀವ್ರವಾದ ವ್ಯಾಕುಲತೆ ಹಾಗೂ ಏಕನಿಷ್ಠೆಗಳಿಂದಲೇ ಸಾಧಿಸಿದರು. ತಮ್ಮ ಆಧ್ಯಾತ್ಮಿಕ ಅನುಭೂತಿಗಳು ಸತ್ಯ ಹಾಗೂ ಶಾಸ್ತ್ರಗಳ ಪ್ರಮಾಣವೂ ಇದಕ್ಕಿದೆ ಎಂದು ತೋರಿಸಲು ಅನಂತರ ಅವರು ಗುರುಗಳನ್ನು ಸ್ವೀಕರಿಸಿದರು.

"ನನಗೆ ಇಂತಹ ಅನುಭವಗಳು ಆಗುತ್ತಿವೆ. ನೀವೇನು ಹೇಳುತ್ತೀರಿ. ನಿಮಗೂ ಹೀಗೆ ಆಗಿದೆಯೇ?" ಎಂದು ಅವರನ್ನು ಪ್ರಶ್ನಿಸುತ್ತಿದ್ದರು. ತನ್ಮೂಲಕ ಗುರುವಿನ ಆವಶ್ಯಕತೆಯನ್ನು ಹಾಗೂ ಶಾಸ್ತ್ರಗಳ ಮಹತ್ತ್ವವನ್ನು ತೋರಿಸಿಕೊಟ್ಟಿದ್ದಾರೆ. ಬೇರೆ ಬೇರೆ ಮಾರ್ಗಗಳು, ಆಚಾರ್ಯರು ಇದ್ದರೂ ಆಧ್ಯಾತ್ಮಿಕ ತತ್ತ್ವವು ಒಂದೇ ಆದ್ದರಿಂದ ಆಧ್ಯಾತ್ಮಿಕ ಅನುಭೂತಿಯೂ ಕೂಡ ಮೂಲತಃ ಒಂದೇ. ಭಾಷೆಯ ಮೂಲಕ ವ್ಯಕ್ತಪಡಿಸಿದಾಗ ಅದು ಬೇರೆ ಎಂದು ತೋರುತ್ತದೆ. ಶ್ರೀರಾಮಕೃಷ್ಣರು ಇದನ್ನು ಹೀಗೆ ಹೇಳುತ್ತಿದ್ದರು, "ಎಲ್ಲ ನರಿಗಳೂ ಊಳಿಡುವುದು ಒಂದೇ ರೀತಿಯಲ್ಲಿ."

ಶಾಸ್ತ್ರಗಳಲ್ಲಿ ಮರಳು ಮತ್ತು ಸಕ್ಕರೆ ಮಿಶ್ರವಾಗಿದೆ, ಸಾಧನೆಗೆ ಬೇಕಾಗುವ ಉಪಯುಕ್ತ ಅಂಶಗಳನ್ನು ವಿವೇಚನೆಯಿಂದ ಬೇರ್ಪಡಿಸಬೇಕಾಗುತ್ತದೆ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಇರುವೆಯಂತೆ ಕೇವಲ ಸಕ್ಕರೆಯನ್ನು ಸ್ವೀಕರಿಸುವ ಸಾಮರ್ಥ್ಯ ನಮ್ಮಲ್ಲಿರಬೇಕು. ಈ ಸಾಮರ್ಥ್ಯವನ್ನು ಆಚಾರ್ಯರು ಪಡೆದಿರುತ್ತಾರೆ. ಸಾಧಕನ ಸಾಮರ್ಥ್ಯಕ್ಕೆ ಅನುಗುಣವಾಗಿ ಮಾರ್ಗವನ್ನು ತೋರಿಸಿಕೊಟ್ಟು ತಾಯಿಯಂತೆ ಸಲಹುತ್ತಾರೆ. ಆಚಾರ್ಯರು ಕೇವಲ ಪಾಂಡಿತ್ಯವನ್ನು ಗಳಿಸಿದವರಲ್ಲ. **ಆಚರತೇ ಇತಿ ಆಚಾರ್ಯಃ** ಎಂದು ಹೇಳಲಾಗಿದೆ. ತಾವು ತಿಳಿದಿರುವ ವಿಚಾರವನ್ನು, ತತ್ತ್ವವನ್ನು ತಮ್ಮ ಆಚರಣೆಯಲ್ಲೂ ಅವರು ವ್ಯಕ್ತಪಡಿಸುತ್ತಾರೆ. ಕೇವಲ ಬಾಯಿಮಾತಿನ ಪಾಂಡಿತ್ಯವು ಹೆಚ್ಚು ದಿನ ನಡೆಯುವುದಿಲ್ಲ. ಒಂದಲ್ಲ ಒಂದು ದಿನ ಒಳಗಿನ ಹುಳುಕು ಹೊರಬೀಳುತ್ತದೆ. ಆದ್ದರಿಂದಲೇ ಒಬ್ಬರನ್ನು ಗುರುವೆಂದು ಸ್ವೀಕರಿಸುವ ಮುನ್ನ ಸರಿಯಾಗಿ ಪರೀಕ್ಷೆ ಮಾಡಿ ನೋಡಬೇಕು ಎಂದು ಶಾಸ್ತ್ರಗಳು ಹೇಳಿವೆ. ಲೌಕಿಕ ಬಯಕೆಗಳಿರುವ, ಶಾಸ್ತ್ರಗಳಿಗೆ ಹಾಗೂ ಸಮಾಜದ ಹಿತಕ್ಕೆ ವಿರುದ್ಧವಾದ ನಡವಳಿಕೆಯಿರುವ ವ್ಯಕ್ತಿ ಎಷ್ಟೇ ಸ್ಫೂರ್ತಿಯುತವಾದ ವಿಚಾರಗಳನ್ನು ಹೇಳುತ್ತಿದ್ದರೂ ಅಂತಹವರನ್ನು ಗುರುವೆಂದು ಸ್ವೀಕರಿಸಬಾರದು. ಹಾಗೆ ಸ್ವೀಕರಿಸಿದರೆ **ಅಂಧೇನೈವ ನೀಯಮಾನಾ ಯಥಾಂಧಾಃ**—ಕುರುಡನು ಕುರುಡರಿಗೆ ದಾರಿತೋರಿಸಿದಂತೆ ಆಗುವುದು ಎಂದು ಕಠೋಪನಿಷತ್ತಿನಲ್ಲಿ ಹೇಳಿದೆ. ಅವಿದ್ಯೆಯಲ್ಲಿ ಸಿಲುಕಿ ಹಾಕಿಕೊಂಡಿದ್ದರೂ ತಾವೇ ಧೀರರು, ಪಂಡಿತರು ಎಂದು ತಿಳಿದುಕೊಂಡು, ವಕ್ರಗತಿಯಲ್ಲಿ ನಡೆಯುವ ಇಂಥ ಗುರುಸ್ಥಾನಿಕರು ತಾವೂ ನಾಶವಾಗುವುದಲ್ಲದೆ ಇತರರನ್ನೂ ನಾಶದೆಡೆಗೆ ಕೊಂಡೊಯ್ಯುವರು. ಆದ್ದರಿಂದಲೇ ತಮ್ಮ ಶಿಷ್ಯರು ತಮ್ಮನ್ನು ಚೆನ್ನಾಗಿ ಪರೀಕ್ಷಿಸಿದ ನಂತರವೇ ಗುರುವಾಗಿ ಸ್ವೀಕರಿಸಬೇಕೆಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅಕ್ಕಸಾಲಿಗನು ಒಡವೆಯನ್ನು ಪರೀಕ್ಷಿಸುವಂತೆ ಚೆನ್ನಾಗಿ ಪರೀಕ್ಷಿಸಿ ಎಂದು ಅವರ ನಂಬಿಕೆಯನ್ನು ದೃಢಪಡಿಸಿಕೊಳ್ಳಲು ಉತ್ತೇಜಿಸುತ್ತಿದ್ದರು.

ಗುರುವು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆಗಿರುವನೇ ಎಂದು ನಿಶ್ಚಯವಾಗಿ ತಿಳಿದ ನಂತರ ಅವನ ಬಳಿಸಾರಬೇಕು ಎಂದು ಶಾಸ್ತ್ರಗಳು ವಿಧಿಸಿವೆ. ಅಜ್ಞಾನವನ್ನು ಹೋಗಲಾಡಿಸಿ ಸಂಸಾರದ ಬಂಧನದಿಂದ ಮುಕ್ತಗೊಳಿಸಬೇಕಾಗಿರುವ ಗುರುವಿಗೆ ಅಂತಹ ಅಧಿಕಾರ ವಿದ್ದರೆ ಮಾತ್ರ ಶಿಷ್ಯನಿಗೂ ಗುರಿಯನ್ನು ಮುಟ್ಟಲು ಸಾಧ್ಯವಾಗುವುದು. ಇಲ್ಲದಿದ್ದರೆ ಕೇರೆಹಾವು ಕಪ್ಪೆಯನ್ನು ಹಿಡಿದಂತೆ ಆಗುವುದು, ನುಂಗಲೂ ಆರದು, ಬಿಡಲೂ ಒಲ್ಲದು ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಒಮ್ಮೆಗೇ ಶಿಷ್ಯನ ಸಂಶಯವನ್ನು ದೂರಮಾಡಬಲ್ಲ ಗುರುವೇ ನಿಜವಾದ ಗುರು. ಸಚ್ಚಿದಾನಂದ ಸ್ವರೂಪಿಯಾದ ಭಗವಂತನೇ ನಿಜವಾದ ಗುರು. ನಾವು ಗುರುರ್ಬ್ರಹ್ಮಾ, ಗುರುರ್ವಿಷ್ಣುಃ ಎಂದು ಸ್ತುತಿಸುವಾಗ ವ್ಯಕ್ತಿಯನ್ನು ಸ್ತುತಿಸುವುದಿಲ್ಲ. ಆ ವ್ಯಕ್ತಿಯ ಮೂಲಕ ನಮ್ಮಲ್ಲಿನ ಅಜ್ಞಾನವನ್ನು ಹೋಗಲಾಡಿಸುವ ಸಚ್ಚಿದಾನಂದ ರೂಪಿಯಾದ ಭಗವಂತನಿಗೇ ನಮಿಸುತ್ತೇವೆ. ಭಗವಂತನ ದಯೆಯು ವ್ಯಕ್ತಿಯ ಮೂಲಕ ಅಭಿವ್ಯಕ್ತವಾಗುತ್ತದೆ ಅಷ್ಟೆ. ಗುರುವು ಪವಿತ್ರವಾದ ಕಾಲುವೆಯಿದ್ದಂತೆ, ಅವನ ಮೂಲಕ ಆಧ್ಯಾತ್ಮಿಕ ಶಕ್ತಿ ಪ್ರವಹಿಸುತ್ತದೆ.

> **ಮಾಳಿಗೆಯ ಮೇಲೆ ಬಿದ್ದ ಮಳೆಯ ನೀರು ವಿಚಿತ್ರವಾಗಿ ಮಾಡಿರುವ ಹುಲಿಯ ಬಾಯಿಯಿಂದ ಕೆಳಗೆ ಹರಿದು ಬರುತ್ತದೆ. ಹುಲಿಯ ಬಾಯಿಂದ ನೀರು ಬರುತ್ತದೆ ಎಂದು ಭಾಸವಾಗುವುದು. ಆದರೆ ಅದು ನಿಜವಾಗಿ ಆಕಾಶದಿಂದ ಬಂದುದು. ಇದರಂತೆ ಮಹಾಪುರುಷರ ಬಾಯಿಂದ ಬರುವ ಉಪದೇಶಗಳು ಅವರಿಂದ ಬಂದಂತೆ ಕಾಣುವುದು. ಆದರೆ ನಿಜವಾಗಿ ಅವು ದೇವರಿಂದ ಬರುವುವು.**
>
> **—ಶ್ರೀರಾಮಕೃಷ್ಣ**

ವಿವೇಕಚೂಡಾಮಣಿಯಲ್ಲಿ ಶ್ರೀಶಂಕರಾಚಾರ್ಯರು ಗುರುವಿನ ಲಕ್ಷಣಗಳನ್ನು ಕೊಟ್ಟಿದ್ದಾರೆ. ಪ್ರಾಜ್ಞನೂ, ವೇದಗಳಲ್ಲಿ ಪಾಂಡಿತ್ಯವುಳ್ಳವನೂ (ಶಾಸ್ತ್ರವಿಧಿಗಳನ್ನು ಬಲ್ಲವನು), ಪಾಪರಹಿತನೂ, ಆಸೆಗಳಿಂದ ಮುಕ್ತನಾಗಿರುವವನೂ, ಪರಬ್ರಹ್ಮವನ್ನು ಅನುಭವದಿಂದ ತಿಳಿದವನೂ, ಆ ಬ್ರಹ್ಮದಲ್ಲೇ ನೆಲೆನಿಂತು ಶಾಂತನಾಗಿರುವವನೂ, ಪ್ರಜ್ವಲಿಸುತ್ತಿರುವ ಬೆಂಕಿಯಂತೆ ಪ್ರದೀಪ್ತನೂ, ಚಾಂಚಲ್ಯರಹಿತನೂ, ಅಹೇತುಕ ದಯಾಸಿಂಧುವೂ, ಸ್ನೇಹಭಾವವುಳ್ಳವನೂ ಆದ ಗುರುವನ್ನು ಶಿಷ್ಯ ವಿನಯದಿಂದ, ಸೇವಾಭಾವದಿಂದ ಬಳಿಸಾರಬೇಕು. ಶಿಷ್ಯನು

ಗುರುವಿಗೆ ಸಾಷ್ಟಾಂಗ ನಮಸ್ಕಾರ ಮಾಡಿ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು ಸೇವೆಯ ಮೂಲಕ ಮನವೊಲಿಸಿ ಜ್ಞಾನವನ್ನು ಪಡೆದುಕೊಳ್ಳಬೇಕು. ಶಿಷ್ಯನಲ್ಲಿ ಮುಮುಕ್ಷುತ್ವವಿರಬೇಕು. ವೈರಾಗ್ಯವಿರಬೇಕು, ಬಂಧನಗಳಿಂದ ಮುಕ್ತನಾಗಬೇಕು ಎಂಬ ತೀವ್ರ ಹಂಬಲದಿಂದ ಅವನು ಚಡಪಡಿಸುತ್ತಿರಬೇಕು. ಎಲ್ಲಕ್ಕಿಂತ ಮಿಗಿಲಾಗಿ ಶ್ರದ್ಧೆಯಿರಬೇಕು ಹಾಗೂ ಸಂಯಮವಿರಬೇಕು. ಇಂತಹ ಒಂದು ಅಪೂರ್ವ ಸಮಾಗಮವನ್ನು ಕೃಷ್ಣ–ಅರ್ಜುನರಲ್ಲಿ, ರಾಮಕೃಷ್ಣ–ವಿವೇಕಾನಂದರಲ್ಲಿ ಕಾಣುತ್ತೇವೆ. ಗುರುವು ನೀಡುವ ಉಪದೇಶವನ್ನು ಗ್ರಹಿಸುವ ಸಾಮರ್ಥ್ಯ ಶಿಷ್ಯನಲ್ಲಿರಬೇಕು, ಅಂತಹ ತೀವ್ರ ಹಂಬಲ ಶಿಷ್ಯನಲ್ಲಿದ್ದರೆ ಗುರುವೂ ದೊರಕುವನು ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ.

ಲೌಕಿಕ ಕ್ಷೇತ್ರದಲ್ಲೂ ನಾವು ಗುರುವಿನಿಂದ ಶಿಕ್ಷಣವನ್ನು ಪಡೆಯುತ್ತೇವೆ. ಆದರೆ ಅಲ್ಲಿ ಗುರುವಿನ ಗುಣಗಳು ಕೇವಲ ಅವರು ಪಾಠಮಾಡುವ ವಸ್ತುವಿಷಯದ ಜ್ಞಾನ ಹಾಗೂ ಸ್ಪಷ್ಟವಾಗಿ ತಿಳಿಸುವ ಸಾಮರ್ಥ್ಯಕ್ಕೆ ಸೀಮಿತವಾಗಿದ್ದರೂ ನಡೆಯುತ್ತದೆ. ಚಾರಿತ್ರ್ಯವಾಗಲಿ, ಸಾಧನೆಯಾಗಲಿ ಇಂದಿನ ದಿನಗಳಲ್ಲಿ ಪ್ರಧಾನವೆನಿಸುವುದಿಲ್ಲ. ಆದರೆ ಗುರುವಾಗಬೇಕಾದ ವ್ಯಕ್ತಿಯಲ್ಲಿ ಈ ಎಲ್ಲ ಗುಣಗಳಿದ್ದರೆ ಮಾತ್ರ ಶಿಷ್ಯನಿಗೆ ಶ್ರದ್ಧೆ ಹುಟ್ಟಿ, ಶಿಕ್ಷಣ ಸಮರ್ಪಕವಾಗಲು ಸಾಧ್ಯ. ಜ್ಞಾನಸರಸ್ವತಿಯು ಹರಿದು ಬರಲು ಇಬ್ಬರೂ ಅನುವು ಮಾಡಿಕೊಡಬೇಕು. ಆಗ ಮಾತ್ರ ಶಿಕ್ಷಣವು ಜೀವನದ ಒಂದು ಅವಿಭಾಜ್ಯ ಅಂಗವಾಗಿ ಮೌಲ್ಯಗಳನ್ನು ಒಳಗೊಳ್ಳುತ್ತದೆ. ಕೇವಲ ಪಠ್ಯಪುಸ್ತಕದ ವಿಚಾರವಿನಿಮಯವನ್ನು ವಿದ್ಯಾರ್ಥಿಯು ಬಯಸುವುದಿಲ್ಲ. ಶಿಕ್ಷಕರ ವ್ಯಕ್ತಿತ್ವವನ್ನು ಸೂಕ್ಷ್ಮವಾಗಿ ಗಮನಿಸಿ ಅದರಿಂದಲೂ ವಿದ್ಯಾರ್ಥಿಗಳು ಪ್ರಭಾವಿತರಾಗುತ್ತಾರೆ. ಅಂತೆಯೇ ವಿದ್ಯಾರ್ಥಿಯಲ್ಲಿ ಆಸಕ್ತಿಯಿದ್ದರೆ ಗುರುವಿಗೂ ಹೆಚ್ಚು ಹೆಚ್ಚು ತಿಳಿಸಿಕೊಡಲು ಉತ್ಸಾಹ ಉಂಟಾಗುತ್ತದೆ. ವಿದ್ಯೆಯೆಲ್ಲವೂ ಮನೋವಿಕಾಸಕ್ಕೆ ದಾರಿ ಮಾಡಿಕೊಡುವ ಸಾಧನೆಯಾದ್ದರಿಂದ ತರತಮಗಳ ವ್ಯತ್ಯಾಸವನ್ನು ಅದರಲ್ಲಿ ಮಾಡಲಾಗದು. ಯಾವುದೇ ಒಂದು ಅಧ್ಯಯನ ವಿಭಾಗವನ್ನು ತೆಗೆದುಕೊಂಡರೂ ತನ್ಮೂಲಕ ಗುರು ಹಾಗೂ ಶಿಷ್ಯ ಉತ್ತಮಿಕೆಯನ್ನು ಸಾಧಿಸಬಹುದು. ಇದು ನಂತರ ಆಧ್ಯಾತ್ಮಿಕ ವಿಕಾಸಕ್ಕೂ ನಾಂದಿಯಾಗುತ್ತದೆ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ, "ಲೌಕಿಕ ಮತ್ತು ಆಧ್ಯಾತ್ಮಿಕ ಜ್ಞಾನವೆಲ್ಲ ಮಾನವನ ಮನಸ್ಸಿನಲ್ಲಿದೆ. ಅನೇಕ ವೇಳೆ ಇದು ಕಾಣುವುದಿಲ್ಲ. ಯಾವುದರಿಂದಲೋ ಮುಚ್ಚಿಹೋಗಿರುವುದು. ಆ ಮುಸುಕನ್ನು ತೆರೆದಂತೆ ನಾವು ತಿಳಿಯುತ್ತಿರುವೆವು ಎಂದು ಭಾವಿಸುವೆವು. ಅನಾವರಣ ಹೆಚ್ಚಾದಂತೆಲ್ಲಾ ಜ್ಞಾನವು ವಿಕಾಸವಾಗುತ್ತಾ ಬರುವುದು. ಯಾರಲ್ಲಿ ಇನ್ನೂ ಇದು ದಪ್ಪವಾಗಿ ಮುಚ್ಚಿಕೊಂಡಿರುವುದೋ ಅವನು ಅಜ್ಞಾನಿ. ಯಾರಲ್ಲಿ ಈ ತೆರೆ ಸಂಪೂರ್ಣವಾಗಿ ಜಾರಿಹೋಗಿರುವುದೋ ಅವನೇ ಸರ್ವಜ್ಞ." ಅಜ್ಞಾನವನ್ನು ಸರಿಸಿ ಸತ್ಯವನ್ನು ತೋರಿಸಿಕೊಡುವ ವ್ಯಕ್ತಿಯೇ ಗುರು. ಜಡವನ್ನು ಚೈತನ್ಯವನ್ನಾಗಿಸುವ ಶಕ್ತಿಯೇ ಗುರುಶಕ್ತಿ. ಎಲ್ಲ ಜ್ಞಾನವೂ ಒಂದೇ ಜ್ಞಾನದ ವಿವಿಧ ಆಯಾಮಗಳಾದ್ದರಿಂದ ಎಲ್ಲ ಗುರುಗಳೂ ಆ ಪರಮ ಗುರುವಿನ ಒಂದು ಅಂಶವಾಗಿ ಪ್ರಕಾಶಿಸುತ್ತಿರುವರು. ಇಂತಹ ದೃಷ್ಟಿ ಶಿಷ್ಯವರ್ಗದಲ್ಲಿದ್ದರೆ, ಇಂದಿನ ಶಿಕ್ಷಣ ಪದ್ಧತಿಯಲ್ಲಿಯೂ ಅನೇಕ ಸುಧಾರಣೆಗಳಾಗುವುದು ಸಾಧ್ಯ. ಅಧ್ಯಾಪಕರಾಗುವವರೂ ಈ ಆದರ್ಶವನ್ನು ಹೊಂದಿದ್ದರೆ, ಶಿಕ್ಷಣವು ಅವರಿಗೆ ಕೇವಲ ಒಂದು ವೃತ್ತಿಯಾಗದೆ, ಜ್ಞಾನದಾನದ ಕಾಯಕವಾಗಿ ಪರಿಣಮಿಸಿ, ಸರಸ್ವತಿಯ ಆರಾಧನೆಯೇ ಆಗುತ್ತದೆ. ✪

### ಗುರುವಿಗೆ ಮೊರೆ

ಇಲ್ಲವೆನ್ನಲು ಕಲಿಸು ಗುರುವೇ
ಮನಸು ಒಲ್ಲದ ವಿಷಯಕೆ ।
ಒಲ್ಲೆನೆನ್ನುವ ದೃಢತೆ ಕರುಣಿಸು
ಸಲ್ಲದಾಸೆಯ ಸೆಳೆತಕೆ ॥

ಸತ್ಯಹೇಳಲು ಹೆದರದಿರುವಾ
ಗಟ್ಟಿತನವನು ಕರುಣಿಸು ।
ಸುಳ್ಳು–ವಂಚನೆಗಳನು ಸಹಿಸದ
ಛಾತಿ–ಮತಿಯನು ಕರುಣಿಸು ॥

ಕಳ್ಳ–ಖೂಳರ ನಂಬಿಬಿಡುವಾ
ಬೆಪ್ಪುತನವನು ತಪ್ಪಿಸು ।
ಯಾರ ಹಿಂದೆಯೊ ಬಾಲಬಡಿಯುವ
ದಾಸ್ಯಪ್ರವೃತ್ತಿಯ ತೊಲಗಿಸು ॥

ಆತ್ಮಸಾಕ್ಷಿಗೆ ವಿಮುಖನಾಗದೆ
ಬದುಕುವಂದವ ಬಿಂಬಿಸು ।
ಸ್ವಾಭಿಮಾನವ ಮಾರಿಕೊಳ್ಳದೆ
ಜೀವಿಸುವ ಸುಖ ಕರುಣಿಸು ॥

—ಡಾ. ನಿರಂಜನ ವಾನಳ್ಳಿ